ಓ ಎಸ್ ನಂ:10/2013
ಡಿ ಡಬ್ಲ್ಯೂ:1

**ದಿನಾಂಕ: 16-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲು: ಶ್ರೀ ಆರ್ ಎಸ್ ಎಂ., ವಾದಿ ಪರ ವಕೀಲರಿಂದ**

ಲಚ್ಮನಾಯ್ಕರವರಿಗೆ ರಾಂಜಿನಾಯ್ಕ, ಚಂದ್ರನಾಯ್ಕ ಮತ್ತು ನಂದ್ಯಾನಾಯ್ಕ ಎಂಬ ಮೂರು ಮಕ್ಕಳು ಇರುತ್ತಾರೆ ಎಂದರೆ ಸರಿ. ರಾಂಜಿನಾಯ್ಕ ಮತ್ತು ಚಂದ್ರನಾಯ್ಕ ಹಾಲಿ ಪೌತಿಯಾಗಿರುತ್ತಾರೆ ಎಂದರೆ ಸಾಕ್ಷಿಯು 3 ಜನ ಪೌತಿಯಾಗಿರುತ್ತಾರೆ ಎಂದು ನುಡಿಯುತ್ತಾರೆ. ರಾಂಜಿನಾಯ್ಕನ ಹೆಂಡತಿ ಲಕ್ಷ್ಮೀಬಾಯಿ ಎಂದರೆ ಸಾಕ್ಷಿಯು ಲಚ್ಚಿಬಾಯಿ ಎಂದ ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ದಾಖಲೆಗಳ ಪ್ರಕಾರ ಲಚ್ಚಿಬಾಯಿ ಅಂತ ಇರುತ್ತದೆ ಎಂದು ನುಡಿಯುತ್ತಾರೆ. 2 ರಿಂದ 4 ನೇ ಪ್ರತಿವಾದಿಯರು ರಾಂಜಿನಾಯ್ಕ ಮತ್ತು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. 5 ನೇ ಪ್ರತಿವಾದಿಯ ಹೆಂಡತಿಯ ಹೆಸರು ನಾತಿಬಾಯಿ. ನಾತಿಬಾಯಿ ಹಾಲಿ ಮೃತರಾಗಿರುತ್ತಾರೆ. 5 ನೇ ಪ್ರತಿವಾದಿಗೆ ಪ್ರತಿವಾದಿ-5(ಎ) ರಿಂದ (ಎಂ) ರವರು ಮಕ್ಕಳಾಗಿರುತ್ತಾರೆ ಎಂದರೆ ಸರಿ.

ಚಂದ್ರನಾಯ್ಕನ ಹೆಂಡತಿಯ ಹೆಸರು ಲಚ್ಚಿಬಾಯಿ. ಚಂದ್ರನಾಯ್ಕನ ಹೆಂಡತಿಯ ಹೆಸರು ಲಚ್ಚಿಬಾಯಿ ಅಂತ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಚಂದ್ರನಾಯ್ಕನಿಗೆ ಚಂದ್ಲಿಬಾಯಿ ಮತ್ತು ಲಕ್ಷ್ಮೀಬಾಯಿ ಅಂತ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಚಂದ್ಲಿಬಾಯಿ ಹಾಲಿ ಮೃತರಾಗಿರುತ್ತಾರೆ ಎಂದರೆ ಸರಿ. ಚಂದ್ಲಿಬಾಯಿಗೆ ಲಚ್ಮನಾಯ್ಕ ಎಂಬ ಒಬ್ಬನೇ ಮಗ ಇರುತ್ತಾನೆ ಎಂದರೆ ಸರಿಯಲ್ಲ. ಲಚ್ಮನಾಯ್ಕರವರಿಗೆ 4 ಮತ್ತು 5 ನೇ ವಾದಿಯರು ಇಬ್ಬರು ಹೆಂಡತಿಯರು ಎಂದರೆ ಇರಬಹುದು, ಸಾಕ್ಷಿಯು ಮುಂದುವರಿದು ಸದರಿಯವರು ನಮ್ಮ ಗ್ರಾಮಸ್ಥರು ಎಂದು ನುಡಿಯುತ್ತಾರೆ. 4 ನೇ ವಾದಿ ಹಾಲಿ ಮೃತರಾಗಿರಬಹುದು ಸದರಿಯವರಿಗೆ ಮಕ್ಕಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 5 ನೇ ವಾದಿಗೆ 1 ರಿಂದ 3 ನೇ ವಾದಿಯರು ಮಕ್ಕಳಾಗಬೇಕು ಎಂದರೆ ಸರಿ. 6 ನೇ ಪ್ರತಿವಾದಿಗೆ 7 ರಿಂದ 9 ನೇ ಪ್ರತಿವಾದಿಗಳು ಮಕ್ಕಳಾಗಬೇಕು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಜಂಬಯ್ಯನಹಟ್ಟಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಜಮೀನು ನನ್ನ ತಾತನ ಜಮೀನು ಎಂದು ನುಡಿಯುತ್ತಾರೆ. ನನ್ನ ತಂದೆ ಹೇಳಿರುವ ಪ್ರಕಾರ ನನ್ನ ತಾತನಿಗೆ ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಸಾಕ್ಷಿಯು ಮುಂದುವರಿದು ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ನನ್ನ ತಾತ ಖರೀದಿಸಿದ ಜಮೀನು ಎಂದು ನುಡಿಯುತ್ತಾರೆ. ನನ್ನ ತಾತ ಸ್ವತ್ತನ್ನು ಖರೀದಿಸಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ತಾತ ಯಾವಾಗ, ಎಷ್ಟು ಮೊತ್ತಕ್ಕೆ ಸ್ವತ್ತನ್ನು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ನನ್ನ ದೊಡ್ಡಪ್ಪನಾದ ರಾಂಜಿನಾಯ್ಕರವರ ಹೆಸರಿನಲ್ಲಿರುತ್ತದೆ. ನನ್ನ ದೊಡ್ಡಪ್ಪನಿಗೆ ಸದರಿ ಸ್ವತ್ತು ಪೌತಿ ಖಾತೆಯಾಗಿರುತ್ತದೆ ಎಂದರೆ ಸರಿ.

ದಾವಾ ಷೆಡ್ಯೂಲ್ ಐಟಂ ನಂ.2 ರ ಸ್ವತ್ತು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.2 ರ ಸ್ವತ್ತು ನನ್ನ ತಾತನ ಆಸ್ತಿಯಾಗಿದ್ದು, ಪೌತಿ ಖಾತೆಯ ಆಧಾರದ ಮೇಲೆ ನನ್ನ ದೊಡ್ಡಪ್ಪನಾದ ರಾಂಜಿನಾಯ್ಕರವರ ಹೆಸರಿಗೆ ಬಂದಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತುಗಳನ್ನು ರಾಂಜಿನಾಯ್ಕು, ನಂದ್ಯಾನಾಯ್ಕು ಮತ್ತು ಚಂದ್ರನಾಯ್ಕರವರು ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿಯವರು ಪೌತಿಯಾದ ನಂತರ ಅವರ ಮಕ್ಕಳುಗಳು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಜಂಟಿಯಾಗಿ ಅನುಭವಿಸುತ್ತಾ ಬರುತ್ತಿದ್ದಾರೆ ಎಂದರೆ ಸರಿ. ರಾಂಜಿನಾಯ್ಕು, ನಂದ್ಯಾನಾಯ್ಕು ಮತ್ತು ಚಂದ್ರನಾಯ್ಕರವರು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ.

ನಾನು ಜಂಭಯ್ಯನಹಟ್ಟಿಯಲ್ಲಿ ಹುಟ್ಟಿರುತ್ತೇನೆ. ಅದೇ ಗ್ರಾಮದಲ್ಲಿ ವ್ಯಾಸಂಗ ಮಾಡಿರುತ್ತೇನೆ. 1 ರಿಂದ 3 ನೇ ವಾದಿಯರು ಜಂಭಯ್ಯನಹಟ್ಟಿಯಲ್ಲಿ ಹುಟ್ಟಿದ್ದು, ಅಲ್ಲಿಯೇ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಂಭಯ್ಯನಹಟ್ಟಿಯಲ್ಲಿ ಹಾಲಿ1 ರಿಂದ 6 ನೇ ತರಗತಿಯವರೆಗೆ ಶಾಲೆ ಇರುತ್ತದೆ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.